ಒಂದು ವೇಳೆ ರೈತರೇ ರಸ್ತೆ ಬದಿಯ ಜಾಗವನ್ನು ಒತ್ತುವರಿ ಮಾಡಿಕೊಂಡು ಕೊಳವೆ ಬಾವಿಯನ್ನು ಹೊಂದಿದ್ದರೆ, ಅಂತಹ ಕ್ರಮವು ಅಕ್ರಮವಾಗಿದ್ದು ಕೊಳವೆ ಬಾವಿಯನ್ನು ಸ್ಥಳಾಂತರಿಸಲು ತಗಲುವ ವೆಚ್ಚವನ್ನು ರೈತರೇ ಭರಿಸಬೇಕಾಗಿರುತ್ತದೆ.

ಇ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಕೊಡ್ಲಿಪೇಟೆ, ಹೋಬಳಿ, ಮಲಗನಹಳ್ಳಿ, ಮಾವಿನಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ. ವೋಲ್ಟೇಜ್ ಸುಧಾರಣೆ ಮಾಡಲು ಹೆಚ್ಚುವರಿ ಪರಿವರ್ತಕವನ್ನು ಒಳಪಡಿಸುವ ಕೆಲಸ ಪ್ರಗತಿಯಲ್ಲಿದೆ.

ಹಿರೇಕೆರೂರು ತಾಲ್ಲೂಕಿನಲ್ಲಿ ಕೆ.ಪಿ.ಟಿ.ಸಿ.ಎಲ್.ನ ಉಪಕೇಂದ್ರಗಳ ಪ್ರಾರಂಭ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 905(1252)

ಸದಸ್ಯರ ಹೆಸರು: ಶ್ರೀ ಬನ್ನಿಕೋಡ್ ಬಿ.ಹೆಚ್.(ಹಿರೇಕೆರೂರು)

ಪ್ರಶ್ನೆ

ಅ. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ 1. ಹಳ್ಳೂರು 2. ಚಿಕ್ಕೇರೂರು 3.ಕೋಡ 4. ಮಾಸೂರು ಗ್ರಾಮಗಳಲ್ಲಿ ವಿದ್ಯುತ್ ಉಪ ಕೇಂದ್ರಗಳನ್ನು (ಗ್ರಿಡ್ಸ್) ಪ್ರಾರಂಭಿಸಲು ನಿರ್ಣಯಿಸಲಾಗಿದೆಯೇ?

ಆ. ಹಾಗಿದ್ದಲ್ಲಿ ಈವರೆಗೆ ತೆಗೆದುಕೊಂಡ ಕ್ರಮಗಳೇನು?

ಇ. ಈ ಕಾಮಗಾರಿಗಳನ್ನು ಕಾರ್ಯಗತ ಮಾಡಲು ಅಂದಾಜು ಮೊತ್ತವೆಷ್ಟು?

ಈ. ಇದರ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಿ ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಲು ಬೇಕಾದ ಸಮಯ ಎಷ್ಟು?

ಉ. ಈ ಬಗ್ಗೆ ಸರ್ಕಾರದ ನೀತಿ ಮತ್ತು ಕ್ರಮದ ಬಗ್ಗೆ ವಿವರ ನೀಡುವುದು?

ಉತ್ತರಿಸುವ ಸಚಿವರು: ಶ್ರೀ ವೀರಕುಮಾರ ಅ. ಪಾಟೀಲ್(ಇಂಧನ ರಾಜ್ಯ ಸಚಿವರು)

ಉತ್ತರ

ಅ. ಹೌದು.

ಆ. 1. ಹಳ್ಳೂರು 2. ಚಿಕ್ಕೇರೂರು 3. ಕೋಡ 4. ಮಾಸೂರು ಮೇಲೆ ಹೇಳಿದ ಪ್ರತಿ

ಗ್ರಾಮದಲ್ಲಿ ಒಂದು 33:11 ಕೆ.ವಿ ಉಪ ಕೇಂದ್ರವನ್ನು ಸ್ಥಾಪಿಸಲು ನಿಗಮದ ತಾಂತ್ರಿಕ ಸಮಿತಿಯ ಒಪ್ಪಿಗೆ ದೊರೆತಿದೆ. ಹಳ್ಳೂರು ಗ್ರಾಮದಲ್ಲಿ ಈಗಾಗಲೇ ಉಪ ಕೇಂದ್ರದ ಕೆಲಸ ಪ್ರಾರಂಭವಾಗಿದೆ. ಚಿಕ್ಕೇರೂರು, ಕೋಡ, ಮಾಸೂರು ಉಪ ಕೇಂದ್ರಗಳ ಸ್ಥಾಪನೆಗಳಿಗಾಗಿ ಭೂಮಿಯನ್ನು ಗುರುತಿಸಲಾಗಿ ಪಶಕ್ಕೆ ತೆಗೆದುಕೊಳ್ಳುವ ಕಾರ್ಯ ಪ್ರಗತಿಯಲ್ಲಿದೆ.

ಇ. ಈ ಗ್ರಾಮಗಳಲ್ಲಿ ಸ್ಥಾಪಿಸಲ್ಪಡುವ ಉಪ ಕೇಂದ್ರಗಳ ಮತ್ತು ವಿದ್ಯುತ್ ಮಾರ್ಗಗಳ ಅಂದಾಜು ಮೊತ್ತ ಈ ಕೆಳಗಿನಂತಿದೆ.

1. ಹಳ್ಳೂರು ರೂ.215.00 ಲಕ್ಷಗಳು
2. ಚಿಕ್ಕೇರೂರು ರೂ.200.00 ಲಕ್ಷಗಳು
3. ಕೋಡ ರೂ.225.00 ಲಕ್ಷಗಳು
4. ಮಾಸೂರು ರೂ.200.00 ಲಕ್ಷಗಳು

ಈ ಮತ್ತು ಉ. ಹಳ್ಳೂರು ಗ್ರಾಮದಲ್ಲಿ ಉಪ ಕೇಂದ್ರದ ಕೆಲಸಗಳು ಈಗಾಗಲೇ ಪ್ರಾರಂಭಿಸಲಾಗಿದೆ. ಮಿಕ್ಕ ಮೂರು ಉಪ ಕೇಂದ್ರಗಳ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತು ಆರ್ಥಿಕ ವ್ಯವಸ್ಥೆ ಆದ ನಂತರ ಕೆಲಸ ಪ್ರಾರಂಭಿಸಲಾಗುವುದು.

ಸೀನಿಯರ್ ಡಿವಿಜನ್ ಜಡ್ಜ್ ನ್ಯಾಯಾಲಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 906(1251)

ಸದಸ್ಯರ ಹೆಸರು: ಶ್ರೀ ಬನ್ನಿಕೋಡ್ ಬಿ.ಹೆಚ್.(ಹಿರೇಕೆರೂರು)

ಪ್ರಶ್ನೆ

ಅ) ಹಾವೇರಿ ಜಿಲ್ಲಾ ಹಿರೇಕೆರೂರು ತಾಲ್ಲೂಕಿನಲ್ಲಿ ಸೀನಿಯರ್ ಡಿವಿಜನ್ ಸಿವಿಲ್ ಜಡ್ಜ್ ನ್ಯಾಯಾಲಯ ಹೊಸದಾಗಿ ಸ್ಥಾಪಿಸಲು ಸಾರ್ವಜನಿಕರು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದಯೇ?

ಆ) ಬಾಣಿಬೆನ್ನೂರು ಸೀನಿಯರ್ ಡಿವಿಜನ್ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಬಾಕಿ ಇರುವ ಮೊಕದ್ದಮೆಗಳ ವಿವರ ನೀಡುವುದು?

ಇ) ಹಿರೇಕೆರೂರಿನಲ್ಲಿ ಇರುವ ನ್ಯಾಯಾಲಯ ಕಟ್ಟಡದಲ್ಲಿ ಹೊಸ ಸೀನಿಯರ್ ಡಿವಿಜನ್